ಪ್ರಮಾಣ ವಚನ ಬೋಧಿಸಿದ ದಿನಾಂಕಃ **05.12.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಯು.ಕೆ. ವಕೀಲರಿಂದ**

ವಾದಿ ಮತ್ತು ಪ್ರತಿವಾದಿಯರು ಕರಾರು ಪತ್ರದ ದಿನಾಂಕ ಪರಿಚಯವಾಗಿರುತ್ತದೆ. ಕರಾರು ಪತ್ರದ ಸಮಯದಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇವೆಂದು ಹೇಳಿದ ವಿಚಾರ ನನಗೆ ಗೊತ್ತು. ವಾದಿ ಮತ್ತು ಪ್ರತಿವಾದಿಯರ ನಡುವೆ ಆದ ಕ್ರಯದ ಮಾತುಕತೆಯ ಬಗ್ಗೆ ನನಗೆ ಮಾಹಿತಿ ಇದೆ. ದಿನಾಂಕಃ**04.04.2018** ರಂದು ನನ್ನ ಕಛೇರಿಯಲ್ಲಿ ಸದರಿ ಮಾತುಕತೆಯಾಗಿರುತ್ತದೆ. ಆ ಸಮಯದಲ್ಲಿ ವಾದಿ**,** ಪ್ರತಿವಾದಿಯರು ಮತ್ತು ಸಾಕ್ಷಿಗಳು ಹಾಜರಿದ್ದರು. ಪ್ರತಿವಾದಿಗಳು ಪಹಣಿ**,** ಮ್ಯೂಟೇಷನ್ ಮತ್ತು ಸಂಬಂಧಪಟ್ಟ ದಾಖಲಾತಿಗಳನ್ನು ತಂದಿದ್ದರು. ನನ್ನ ಮುಂದೆ ಯಾವುದೇ ಕ್ರಯದ ಕರಾರಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ಚೆಕ್‌ಗಳಲ್ಲಿ ನಮೂದಿಸಿರುವ ಮೊತ್ತವು ಯಾರಿಗೆ ಹೋಗಬೇಕೆಂದು ಬರೆದಿದ್ದೀರಾ? ಎಂದರೆ ಇಲ್ಲ. ಆದರೆ ಖಾತೆದಾರರಿಗೆ ಹೋಗಬೇಕಾಗುತ್ತದೆ. ನನ್ನ ಮುಂದೆ ವಾದಿಯು ಚೆಕ್ ನ್ನು **1**ನೇ ಪ್ರತಿವಾದಿಗೆ ಕೊಟ್ಟಿದ್ದರು. ನನ್ನ ಮುಂದೆ ವಾದಿಯು ಸದರಿ ಚೆಕ್ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯು ಕರಾರು ಪತ್ರದ ಪ್ರತಿ ಪುಟದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿ. ನಾನು ಸದರಿ ಕರಾರು ಪತ್ರವನ್ನು ಬರೆದಿಲ್ಲ ಹಾಗೂ ನನ್ನ ಮುಂದೆ ಯಾವುದೇ ಕ್ರಯದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ**04.04.2018** ರಂದು ಬೇರೆ ಯಾವುದೇ ಪತ್ರಗಳನ್ನು ನಾನು ತಯಾರು ಮಾಡಿಲ್ಲ. ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ನಿಮಗೆ ಇದೇ ಕ್ರಯಪತ್ರದ ಬಗ್ಗೆ ಸಾಕ್ಷಿ ಹೇಳಲು ಸಮನ್ಸ್ ಬಂದಿದೆ ಎಂದು ಹೇಗೆ ತಿಳಿಯಿತು ಎಂದರೆ ಸಾಕ್ಷಿಯು ನಾವು ಪ್ರತಿದಿನ ಪತ್ರ ಬರವಣಿಗೆ ಮಾಡುತ್ತಿರುವ ಕಾರಣ

ಪಕ್ಷಗಾರರನ್ನು ನೋಡಿದರೆ ನಮಗೆ ತಿಳಿಯುತ್ತದೆ ಎಂದು ಹೇಳುತ್ತಾರೆ. ಪ್ರಮಾಣ ಪತ್ರವನ್ನು ವಾದಿ ಪರ ವಕೀಲರು ತಯಾರಿಸಿದ್ದಾರೆ ಎಂದರೆ ಸರಿ. ಅವರು ತಯಾರಿಸಿದ ನಂತರ ನಾನು ಓದಿದ್ದೇನೆ ಎಂದರೆ ಸರಿ. ನನಗೆ ವಾದಿಯು ಈ ಕೇಸಿನಲ್ಲಿ ಸಾಕ್ಷಿ ಹೇಳಲು ಕರೆದಿದ್ದಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರ ನಡುವೆ ಆಗಿರುವ ವ್ಯವಹಾರವು ಹಣದ ಭದ್ರತೆಗಾಗಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಸರ್ಕಾರ ನಿಗದಿಸಿದ ಆಸ್ತಿಯ ಮೌಲ್ಯ ಹಾಗೂ ಮಾರುಕಟ್ಟೆಯ ಮೌಲ್ಯದಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಾನು ದಾವಾ ಆಸ್ತಿಗೆ ಸರ್ಕಾರ ನಿಗದಿ ಮಾಡಿದ ಮೌಲ್ಯವನ್ನು ಕರಾರು ಪತ್ರದಲ್ಲಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನೋಡಿಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.